**All India Radio: Bangalore**
**National Bulletin In Kannada**
**03.04.2025  07.35 a.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**<><><><>**

ಮುಖ್ಯಾಂಶಗಳು

1. ಆರನೇ ಬಿಮ್‌ಸ್ಟೆಕ್ ಶೃಂಗಸಭೆ : ಪ್ರಧಾನಿ ನರೇಂದ್ರ ಮೋದಿ ಥಾಯ್ಲೆಂಡ್‌ಗೆ ಇಂದಿನಿಂದ ೨ ದಿನಗಳ ಪ್ರವಾಸ
2. ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆ ದೃಢೀಕರಿಸುವ ಶಾಸನಬದ್ಧ ನಿರ್ಣಯ ಲೋಕಸಭೆಯಲ್ಲಿ ಅಂಗೀಕಾರ
3. ಭಾರತದ ಆಮದುಗಳ ಮೇಲೆ ಶೇಕಡ ೨೬ರಷ್ಟು ಪ್ರತಿಸುಂಕ ವಿಧಿಸಿದ ಅಮೆರಿಕ
4. ಐಪಿಎಲ್ ಟಿ-೨೦ ಕ್ರಿಕೆಟ್ : ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಗುಜರಾತ್ ಟೈಟಾನ್ಸ್‌ಗೆ ೮ ವಿಕೆಟ್‌ಗಳ ಭರ್ಜರಿ ಜಯ

<><><><>

ಆರನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಥಾಯ್ಲೆಂಡ್‌ಗೆ ೨ ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ೨೦೧೬ ಮತ್ತು ೨೦೧೯ರ ನಂತರ ಥಾಯ್ಲೆಂಡ್‌ಗೆ ಇದು ಪ್ರಧಾನಿಯವರ ೩ನೇ ಭೇಟಿಯಾಗಿದೆ. ಈ ಭೇಟಿಯ ಸಮಯದಲ್ಲಿ, ಪ್ರಧಾನಿಯವರು, ಬ್ಯಾಂಕಾಕ್‌ನಲ್ಲಿ ಥಾಯ್ ಪ್ರಧಾನಿ ಪೇಟೊಂಗ್‌ಟಾರ್ನ್ ಶಿನವಾತ್ರ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. 'ಬಿಮ್‌ಸ್ಟೆಕ್ - ಸಮೃದ್ಧ, ಸ್ಥಿತಿಸ್ಥಾಪಕ ಮತ್ತು ಮುಕ್ತ" ಧ್ಯೇಯದೊಂದಿಗೆ ಇದೇ ಶುಕ್ರವಾರ ನಡೆಯಲಿರುವ ೬ನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಬ್ಯಾಂಕಾಕ್ ವಿಷನ್ ೨೦೩೦ ಅನ್ನು ಅಂಗೀಕರಿಸಲಾಗುವುದು.

<><><><>

ವಕ್ಫ್ ತಿದ್ದುಪಡಿ ಮಸೂದೆ, ೨೦೨೫ ಮತ್ತು ಮುಸಲ್ಮಾನ್ ವಕ್ಫ್ ರದ್ದತಿ ಮಸೂದೆ, ೨೦೨೪ ಎರಡು ಮಸೂದೆಗಳನ್ನು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನಿನ್ನೆ ಲೋಕಸಭೆಯಲ್ಲಿ ಮಂಡಿಸಿದರು. ಸಂಸತ್ತಿನಲ್ಲಿ ಮಂಡಿಸಲಾದ ಈ ಮಸೂದೆಯನ್ನು ವಕ್ಫ್ ತಿದ್ದುಪಡಿ ಮಸೂದೆ, ೨೦೨೪ ಎಂದು ಕರೆಯಲಾಗುವುದಿಲ್ಲ, ಬದಲಿಗೆ ವಕ್ಫ್ ತಿದ್ದುಪಡಿ ಮಸೂದೆ, ೨೦೨೫

ಎಂದು ಕರೆಯಲಾಗುತ್ತದೆ. ಈ ವೇಳೆ ಮಾತನಾಡಿದ ಅವರು, ಈ ಮಸೂದೆಯಿಂದ ಮುಸ್ಲಿಮರ ಧಾರ್ಮಿಕ ಆಚರಣೆಗೆ ಯಾವುದೇ ತೊಂದರೆ ಇಲ್ಲ. ಯಾರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಉದ್ದೇಶ ಹೊಂದಿಲ್ಲ. ಬದಲಾಗಿ ಇದು ವಕ್ಫ್ ಬೋರ್ಡ್‌ಗಳಿಗೆ ಸಂಬಂಧಿಸಿದ ಆಸ್ತಿಗಳಿಗೆ ಮಾತ್ರ ಅನ್ವಯವಾಗಲಿದೆ ಎಂದು ಹೇಳಿದ್ದಾರೆ.

ಧ್ವನಿ: ಕಿರಣ್ ರಿಜಿಜು (೧೫ ಸೆಕೆಂಡ್‌ಗಳು)

ಈ ಕುರಿತಂತೆ ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಆಡಳಿತ ಪಕ್ಷದ ಸದಸ್ಯರು ಮಸೂದೆಯನ್ನು ಸಮರ್ಥಿಸಿಕೊಂಡಿದ್ದಾರೆ. ಇದಕ್ಕೂ ಮೊದಲು, ಕೇಂದ್ರ ಗೃಹ ಸಚಿವ ಅಮಿತ್ ಶಾ, ಜಂಟಿ ಸಂಸದೀಯ ಸಮಿತಿಯು ಸಂಪುಟವು ಅನುಮೋದಿಸಿದ ನಂತರ, ಈ ಮಸೂದೆಯನ್ನು ತರಲಾಗಿದೆ ಎಂದು ಹೇಳಿದರು. ಪ್ರಸ್ತುತ ವಿಧೇಯಕದ ಪ್ರಕಾರ ವಕ್ಫ್ ಮಂಡಳಿಗಳು ವಿವಿಧ ಮುಸ್ಲಿಂ ಪಂಗಡಗಳು, ಮಹಿಳೆಯರು ಮತ್ತು ಮುಸ್ಲಿಂಯೇತರರನ್ನು ಒಳಗೊಂಡಂತೆ ಇತರರ ಪ್ರಾತಿನಿಧ್ಯವನ್ನು ಹೊಂದಿರಲಿದೆ ಎಂದ ಸಚಿವರು, ಪ್ರತಿಪಕ್ಷಗಳು ಮಸೂದೆ ಕುರಿತು ಜನರನ್ನು ದಾರಿ ತಪ್ಪಿಸುತ್ತಿವೆ ಎಂದು ಆರೋಪಿಸಿದರು. ಬೆಲೆ ಏರಿಕೆ, ನಿರುದ್ಯೋಗ, ವೈಫಲ್ಯ ಮರೆಮಾಚಲು ಸರ್ಕಾರ ಈ ಮಸೂದೆ ತಂದಿದೆ ಎಂದು ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಸಂಸತ್ತಿನಲ್ಲಿ ವಕ್ಫ್ ತಿದ್ದುಪಡಿ ಮಸೂದೆ ಮಂಡಿಸಿರುವುದು ಐತಿಹಾಸಿಕ ನಿರ್ಣಯವಾಗಿದೆ ಎಂದು ಕೊಪ್ಪಳ ಜಿಲ್ಲಾ ಪಂಚಾಯತಿಯ ಮಾಜಿ ಸದಸ್ಯ ಅರವಿಂದಗೌಡ ಪೊಲೀಸ್ ಪಾಟೀಲ ಹೇಳಿದ್ದಾರೆ.

ಬೈಟ್:- ಅರವಿಂದಗೌಡ ಪೊಲೀಸ್ ಪಾಟೀಲ, ಜಿಪಂ ಮಾಜಿ ಸದಸ್ಯರು

ಬೇನಾಮಿ ವಕ್ಫ್ ಹೆಸರಿನಲ್ಲಿ ಲಕ್ಷಾಂತರ ಎಕರೆ ಸ್ಥಳವನ್ನು ಲಪಟಾಯಿಸಲಾಗಿತ್ತು. ವಕ್ಫ್ ಮಸೂದೆ ಮಂಡನೆಯಿಂದ ರೈತರು ಹಾಗೂ ಸರ್ಕಾರದ ಜಾಗಗಳನ್ನು ರಕ್ಷಿಸಲು ಸಹಕಾರಿಯಾಗಿದೆ ಎಂದು ಕೊಪ್ಪಳ ನಗರದ ನಿವಾಸಿ ಮಧುರಾ ಕರಣಂ ಹೇಳಿದ್ದಾರೆ.

ಬೈಟ್:- ಮಧುರಾ ಕರಣಂ, ಕೊಪ್ಪಳ ನಗರದ ನಿವಾಸಿ

<><><><>

ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆಯನ್ನು ದೃಢೀಕರಿಸುವ ಶಾಸನಬದ್ಧ ನಿರ್ಣಯವನ್ನು ಲೋಕಸಭೆಯಲ್ಲಿ ನಿನ್ನೆ ಅಂಗೀಕರಿಸಿತು. ಕಾಂಗ್ರೆಸ್‌ನ ಶಶಿ ತರೂರ್, ಎಸ್‌ಪಿಯ ಲಾಲ್ಜಿ ವರ್ಮಾ, ಶಿವಸೇನೆಯ ಯುಬಿಟಿ ಬಣದ ಅರವಿಂದ್ ಸಾವಂತ್, ಟಿಎಂಸಿಯ ಸಾಯೋನಿ ಘೋಷ್ ಮತ್ತು ಇತರರು ನಿರ್ಣಯದ ಕುರಿತು ಮಾತನಾಡಿದರು. ಮಣಿಪುರದಲ್ಲಿನ ಹಿಂಸಾಚಾರ ಮತ್ತು ಅಲ್ಲಿನ ಜನರು ಎದುರಿಸುತ್ತಿರುವ ಕಷ್ಟಗಳ ವಿಷಯವನ್ನು ಪ್ರಸ್ತಾಪಿಸಿದರು. ಶಾಸನಬದ್ಧ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಣಿಪುರದಲ್ಲಿ ಸಾಮಾನ್ಯ ಸ್ಥಿತಿ ಪುನಃಸ್ಥಾಪಿಸಲು ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಮಣಿಪುರದಲ್ಲಿ ಶಾಂತಿ ಸ್ಥಾಪಿಸುವುದು ಸರ್ಕಾರದ ಮೊದಲ ಆದ್ಯತೆಯಾಗಿದೆ ಎಂದು ಹೇಳಿದ್ದಾರೆ. ಕಳೆದ ನಾಲ್ಕು ತಿಂಗಳಲ್ಲಿ ಮಣಿಪುರದಲ್ಲಿ ಯಾವುದೇ ಸಾವು ವರದಿಯಾಗಿಲ್ಲ. ರಾಜ್ಯದಲ್ಲಿ ಶೀಘ್ರದಲ್ಲೇ ಶಾಂತಿ ಪುನಃಸ್ಥಾಪಿಸಬೇಕೆಂದು ಸರ್ಕಾರ ಬಯಸುತ್ತದೆ. ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿದ ನಂತರ, ಸರ್ಕಾರವು ಎರಡೂ ಗುಂಪುಗಳೊಂದಿಗೆ ಸಭೆಗಳನ್ನು ನಡೆಸಿದೆ ಎಂದು ಸಚಿವ ಅಮಿತ್ ಶಾ ತಿಳಿಸಿದ್ದಾರೆ.

<><><><>

ದೇಶದ ೮೧ ಕೋಟಿಗೂ ಹೆಚ್ಚು ಜನರಿಗೆ ಪ್ರತಿ ತಿಂಗಳು ಉಚಿತ ಆಹಾರ ಧಾನ್ಯವನ್ನು ಕೇಂದ್ರ ವಿತರಿಸುತ್ತಿದ್ದು, ಇದಕ್ಕಾಗಿ ೨ ಲಕ್ಷ ೧೧ ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ ಎಂದು ಕೇಂದ್ರ ಆಹಾರ, ಗ್ರಾಹಕ ವ್ಯವಹಾರಗಳು ಮತ್ತು ಸಾರ್ವಜನಿಕ ವಿತರಣೆ ಖಾತೆ ಸಚಿವ ಪ್ರಲ್ಹಾದ್ ಜೋಶಿ ಲೋಕಸಭೆಯಲ್ಲಿ ನಿನ್ನೆ ಹೇಳಿದ್ದಾರೆ.

ಪ್ರಶ್ನೋತ್ತರ ಕಲಾಪದಲ್ಲಿ ಅವರು, ಈ ಯೋಜನೆ ಕೇಂದ್ರ ಮತ್ತು ರಾಜ್ಯಗಳ ಜಂಟಿ ಜವಾಬ್ದಾರಿಯ ಕಾರ್ಯಕ್ರಮವಾಗಿದ್ದು, ವಿವಿಧ ವರ್ಗಗಳ ರಾಜ್ಯಗಳಿಗೆ ಶೇಕಡಾ ೫೦, ಶೇಕಡಾ ೭೫ ಹಾಗೂ ಶೇಕಡಾ ೬೦ ರಷ್ಟು ನೆರವನ್ನು ಕೇಂದ್ರ ಸರ್ಕಾರ ಒದಗಿಸುತ್ತಿದೆ. ಧಾನ್ಯಗಳ ಖರೀದಿ, ರಾಜ್ಯಗಳ ಗೋದಾಮುಗಳಿಗೆ ಪೂರೈಕೆ, ಅಂತಾರಾಜ್ಯ ಸರಬರಾಜು ಕಾರ್ಯಗಳನ್ನು ಕೇಂದ್ರ ನಿಭಾಯಿಸುತ್ತಿದೆ ಎಂದು ತಿಳಿಸಿದ್ದಾರೆ.

<><><><>

ಇಂದು ಪ್ರಜಾಪ್ರಭುತ್ವವು ವಾದಗಳ ಮೇಲೆ ಅಲ್ಲ. ಬದಲಾಗಿ ರಚನಾತ್ಮಕ ಸಂಭಾಷಣೆಗಳ ಮೂಲಕ ನಾಗರಿಕರ ಹೃದಯಗಳನ್ನು ಗೆಲ್ಲುವುದರ ಮೇಲೆ ಅಭಿವೃದ್ಧಿ ಹೊಂದುತ್ತದೆ ಎಂದು ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯ ಹೇಳಿದ್ದಾರೆ. ನವದೆಹಲಿಯಲ್ಲಿ ಎರಡು ದಿನಗಳ ವಿಕಸಿತ ಭಾರತ್ ಯುವ ಸಂಸತ್ ಉತ್ಸವ ೨೦೨೫ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತದ ವೈವಿಧ್ಯತೆಯನ್ನು ಶ್ಲಾಘಿಸಿದರು. ಅದರ ವ್ಯತ್ಯಾಸಗಳ ಹೊರತಾಗಿಯೂ, ಸಂಸತ್ತು ಏಕತೆಯ ಸಂಕೇತವಾಗಿ ನಿಂತಿದೆ ಎಂದರು. ಯುವಕರು ತಮ್ಮ ವೃತ್ತಿಯನ್ನು ಲೆಕ್ಕಿಸದೆ, ರಾಷ್ಟ್ರ ಮೊದಲು ಎಂಬ ಮನಸ್ಥಿತಿಯನ್ನು ಅಳವಡಿಸಿಕೊಳ್ಳುವಂತೆ ಸಚಿವರು ಸಲಹೆ ನೀಡಿದರು. 'ವಿಕಸಿತ ಭಾರತ್ ಯುವ ಸಂಸತ್ತು' ಭವಿಷ್ಯದ ನಾಯಕರನ್ನು ಪೋಷಿಸುವ ವೇದಿಕೆಯಾಗಿದ್ದು, ಯುವ ವ್ಯಕ್ತಿಗಳು ಅರ್ಥಪೂರ್ಣ ಚರ್ಚೆಗಳಲ್ಲಿ ತೊಡಗಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಈ ಉಪಕ್ರಮದ ಭಾಗವಾಗಲು ೭೫ ಸಾವಿರಕ್ಕೂ ಹೆಚ್ಚು ಯುವಕರು ಒಂದು ನಿಮಿಷದ ವಿಡಿಯೋಗಳನ್ನು ಸಲ್ಲಿಸಿದ್ದಾರೆ ಎಂದು ಸಚಿವ ಡಾ. ಮನ್ಸುಖ್ ಮಾಂಡವಿಯ ತಿಳಿಸಿದರು.

<><><><>

ಭಾರತ ಸೇರಿದಂತೆ ಹಲವಾರು ದೇಶಗಳ ಮೇಲೆ ಪ್ರತಿ ಸುಂಕಗಳನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಭಾರತದ ಆಮದುಗಳ ಮೇಲೆ ಶೇಕಡಾ ೨೬ ರಷ್ಟು ಪ್ರತಿ ಸುಂಕವನ್ನು ವಿಧಿಸಲಾಗುತ್ತದೆ. ಅಮೆರಿಕದ ಶ್ವೇತಭವನದ ಗುಲಾಬಿ ಉದ್ಯಾನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಡೊನಾಲ್ಡ್ ಟ್ರಂಪ್, ಸುಂಕಗಳು ಸಂಪೂರ್ಣವಾಗಿ ಪ್ರತಿ ಸುಂಕವಲ್ಲ. ಅಮೆರಿಕಕ್ಕೆ ಈ ದೇಶಗಳು ವಿಧಿಸುವ ಸುಂಕದ ಅರ್ಧದಷ್ಟು ಸುಂಕವನ್ನು ನಾವು ಆ ದೇಶಗಳಿಗೆ ವಿಧಿಸುತ್ತಿದ್ದೇವೆ ಎಂದು ಹೇಳಿದರು. ಯುರೋಪಿಯನ್ ಒಕ್ಕೂಟದ ರಾಷ್ಟ್ರಗಳ ಆಮದುಗಳ ಮೇಲೆ ಶೇಕಡಾ ೨೦ ರಷ್ಟು ಮತ್ತು ಬ್ರಿಟನ್‌ನ ಆಮದುಗಳ ಮೇಲೆ ಶೇಕಡಾ ೧೦ ರಷ್ಟು ಸುಂಕವನ್ನು ಹಾಗೂ ಜಪಾನ್‌ನ ಆಮದುಗಳ ಮೇಲೆ ಶೇಕಡಾ ೨೪ ರಷ್ಟು ಪ್ರತಿ ಸುಂಕವನ್ನು ವಿಧಿಸುವುದಾಗಿ ಅಮೆರಿಕ ಅಧ್ಯಕ್ಷರು ಘೋಷಿಸಿದ್ದಾರೆ.

<><><><>

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್-ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಗುಜರಾತ್ ಟೈಟಾನ್ಸ್ ತಂಡ ೮ ವಿಕೆಟ್‌ಗಳಿಂದ ಭರ್ಜರಿ ಜಯ ದಾಖಲಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ

ರಾಯಲ್ ಚಾಲೆಂಜರ್ಸ್ ಬೆಂಗಳೂರು, ನಿಗದಿತ ೨೦ ಓವರ್‌ಗಳಲ್ಲಿ ೮ ವಿಕೆಟ್ ನಷ್ಟಕ್ಕೆ ೧೬೯ ರನ್ ಗಳಿಸಿದರು. ಆರ್‌ಸಿಬಿ ಪರ ಲಿವಿಂಗ್‌ಸ್ಟೋನ್ ಅತಿ ಹೆಚ್ಚು ೫೪ ರನ್ ಗಳಿಸಿದರು. ಗುಜರಾತ್ ಟೈಟಾನ್ಸ್ ಪರ ಬೌಲರ್ ಸಿರಾಜ್ ೩ ವಿಕೆಟ್ ಹಾಗೂ ಸಾಯಿ ಕಿಶೋರ್ ೨ ವಿಕೆಟ್ ಉರುಳಿಸಿದರು. ಆರ್‌ಸಿಬಿ ನೀಡಿದ ಗುರಿಯನ್ನು ಬೆನ್ನತ್ತಿದ್ದ ಗುಜರಾತ್ ಟೈಟಾನ್ಸ್, ೧೭.೫ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೧೭೦ ರನ್ ಗಳಿಸಿ, ಗೆಲುವಿನ ನಗೆ ಬೀರಿತು. ಗುಜರಾತ್ ಟೈಟಾನ್ಸ್ ಪರ ಜಾಸ್ ಬಟ್ಲರ್ ಅತಿ ಹೆಚ್ಚು ೭೩ ರನ್ ಸಿಡಿಸಿದರು. ಕೊಲ್ಕೊತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಇಂದು ನಡೆಯಲಿರುವ ಪಂದ್ಯದಲ್ಲಿ ಕೊಲ್ಕೊತ್ತಾ ನೈಟ್ ರೈಡರ್ಸ್ ಮತ್ತು ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

<><><><>

ಇಂದಿನಿಂದ ಅರ್ಜೆಂಟೀನಾದ ಬ್ಯೂನಸ್ ಐರಿಸ್‌ನಲ್ಲಿ ನಡೆಯಲಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ೨೦೨೫ ರಲ್ಲಿ ೪೩ ಸದಸ್ಯರ ಭಾರತೀಯ ಶೂಟಿಂಗ್ ತಂಡವನ್ನು ಮನು ಭಾಕರ್ ಮುನ್ನಡೆಸಲಿದ್ದಾರೆ.

<><><><>

ಇದೇ ೭ ರಿಂದ ಪೋರ್ಚುಗಲ್ ಮತ್ತು ಸ್ಲೋವೇಕಿಯಾ ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ೪ ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ತಮ್ಮ ಭೇಟಿಯ ಸಂದರ್ಭದಲ್ಲಿ ಪೋರ್ಚುಗಲ್‌ನ ರಾಷ್ಟ್ರಪತಿ ಮಾರ್ಸೆಲೊ ರೆಬೆಲೊ ಡಿ ಸೌಸಾ ಅವರನ್ನು ಭೇಟಿಯಾಗಲಿದ್ದು, ನಿಯೋಗ ಮಟ್ಟದ ಮಾತುಕತೆ ನಡೆಸಲಿದ್ದಾರೆ. ಇದೇ ಸಂದರ್ಭದಲ್ಲಿ ಪೋರ್ಚುಗಲ್‌ನ ಪ್ರಧಾನಿ ಲೂಯೀಸ್ ಮಾಂಟೆನೆಗ್ರೋ ಮತ್ತು ರಾಷ್ಟ್ರೀಯ ಅಸೆಂಬ್ಲಿ ಅಧ್ಯಕ್ಷ ಜೋಸ್ ಪೆಡ್ರೊ ಅಂಗುಯಾರ್ ಬ್ರಾಂಕೊ ಅವರನ್ನು ಸಹ ಭೇಟಿಯಾಗಲಿದ್ದಾರೆ.

<><><><>